ಹಿತದೃಷ್ಟಿಯಿಂದ ಹಳ್ಳಿಗಾಡಿನ ಪ್ರದೇಶದ ಜನರ ಹಿತದೃಷ್ಟಿಯಿಂದ ಇದನ್ನು ಸೀರಿಯಸ್ಸಾಗಿ ಗಮನಿಸಿ ಇವತ್ತು ವಿದ್ಯುತ್ತನ್ನು ಕೊಡುವಂತಹದ್ದನ್ನು ಮಾಡಬೇಕೆಂಬ ಒತ್ತಾಯವನ್ನು ಮಾಡಿ ನನ್ನ ಮಾತನ್ನು ಮುಗಿಸುತ್ತೇನೆ.

**ಛೇರ್ಮನ್**: ಪಕ್ಷದ ಕಡೆಯಿಂದ ತಮ್ಮ ಹೆಸರು ಇದೆ ಮಾನ್ಯ ಅಭಯಚಂದ್ರರವರೆ, ತಾವು ಮಾತನಾಡಿ. ರಾಜ್ಯಪಾಲರ ಭಾಷಣಕ್ಕೆ ಸಂಬಂಧಪಟ್ಟಂತೆ ವಂದನಾರ್ಪಣ ಪ್ರಸ್ತಾವ.

**ಶ್ರೀ ದಿನೇಶ್ ಗುಂಡೂರಾವ್**: ಮಾನ್ಯ ಛೇರ್ಮನ್‌ರವರೆ, ನಾನು ಚರ್ಚೆಯನ್ನು ಪ್ರಾರಂಭಮಾಡುತ್ತೇನೆ.

**ಛೇರ್ಮನ್**: ತಮ್ಮ ಚರ್ಚೆಯನ್ನು ನಾಳೆ ಮುಂದುವರಿಸಿ. ಎಲ್ಲರಿಗೂ ನಾಳೆ ಮಾತನಾಡುವುದಕ್ಕೆ ಅವಕಾಶವನ್ನು ಕೊಡುತ್ತೇನೆ. ಈಗ, ರಾಜ್ಯಪಾಲರ ಭಾಷಣಕ್ಕೆ ಸಂಬಂಧಿಸಿದ ವಂದನಾರ್ಪಣಾ ಪ್ರಸ್ತಾವವನ್ನು ಮಂಡಿಸುವುದು.

(ಈ ಹಂತದಲ್ಲಿ ಮಾನ್ಯ ಅಧ್ಯಕ್ಷರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

**6. ರಾಜ್ಯಪಾಲರ ಭಾಷಣಕ್ಕೆ ಸಲ್ಲಿಸತಕ್ಕಂತಹ ವಂದನಾ ನಿರ್ಣಯ ಮಂಡನೆ:**

**ಶ್ರೀ ನರಸಿಂಹನಾಯಕ್** (ಸುರಪುರ): ಮಾನ್ಯ ಅಧ್ಯಕ್ಷರೆ, ನಾನು ಈ ಕೆಳಕಂಡ ಪ್ರಸ್ತಾವವನ್ನು ಮಂಡಿಸಲು ತಮ್ಮ ಅನುಮತಿಯನ್ನು ಕೋರುತ್ತೇನೆ.

"2010ರ ಫೆಬ್ರವರಿ 25ರಂದು ವಿಧಾನಮಂಡಲದ ಸದಸ್ಯರನ್ನುದ್ದೇಶಿಸಿ ದಯಪಾಲಿಸಿದ ಭಾಷಣಕ್ಕಾಗಿ ಈ ಅಧಿವೇಶನದಲ್ಲಿ ಸೇರಿರುವ ವಿಧಾನಸಭೆ:ವಿಧಾನಪರಿಷತ್ತಿನ ಸದಸ್ಯರಾದ ನಾವು ರಾಜ್ಯಪಾಲರಿಗೆ ಕೃತಜ್ಞತಾಪೂರ್ವಕವಾದ ವಂದನೆಗಳನ್ನು ಸಮರ್ಪಿಸುತ್ತೇವೆ."

**ಶ್ರೀ ಎ.ನಾರಾಯಣಸ್ವಾಮಿ** (ಆನೇಕಲ್): ಮಾನ್ಯ ಅಧ್ಯಕ್ಷರೆ, ನಾನು ಪ್ರಸ್ತಾವನೆಯನ್ನು ಅನುಮೋದಿಸುತ್ತೇನೆ.

**ಪ್ರಸ್ತಾವವನ್ನು ಮಂಡಿಸಲಾಯಿತು.**

**ಅಧ್ಯಕ್ಷರು**: ಈಗ ಬಿಲ್ಲುಗಳನ್ನು introduce ಮಾಡುತ್ತೇನೆ.